ಶ್ರೀ ಬಿ.ರಮಾನಾಥ ರೈ :– ಬೆಳೆ ಹಾನಿ ಬಗ್ಗೆ ಕೃಷಿ ಇಲಾಖೆಯವರು ಏನು ಶಿಫಾರಸ್ಸು ಮಾಡುತ್ತಾರೆಯೋ ಅಷ್ಟನ್ನು ಕೊಡುವುದಕ್ಕೆ ನಾವು ಶಿಫಾರಸ್ಸು ಮಾಡಿದ್ದೇವೆ. ಶೀಘ್ರದಲ್ಲಿ ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು :– ಮಾನ್ಯ ಸುನೀಲ್ ಕುಮಾರ್‌ರವರದು ಮುಂದಿನ ಪ್ರಶ್ನೆ ಇದೆ. ಮುಜರಾಯಿ ಇಲಾಖೆ ಸಚಿವರು ಬಂದಿಲ್ಲ. ನಿಮ್ಮ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳುತ್ತೇನೆ.

Works of Left Irrigation Project

4 (85) ಶ್ರೀ ಗೋವಿಂದ ಎಂ.ಕಾರಜೋಳ · ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ, ಬಾಗಲಕೋಟೆ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಬಬಲೇಶ್ವರ–ಸಾವಳಗಿ ಏತ ನೀರಾವರಿ ಯೋಜನೆಯ ಕಾಮಗಾರಿ ಸರ್ಕಾರ ಮಂಜೂರಾತಿ ನೀಡಿದ್ದಾಗ್ಯೂ. ಕಾಮಗಾರಿ ಪ್ರಾರಂಭಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಆ) ಬಬಲೇಶ್ವರ–ಸಾವಳಿಗಿ ಭಾಗದ ರೈತರ ಹೊಲಗಾಲುವೆ (ಫ್ಲೋ ಇರಿಗೇಶನ) ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವಂತೆ ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಎಷ್ಟುಅವಧಿಯಲ್ಲಿ ಕಾಮಗಾರಿಕೆಯನ್ನು ಪೂರ್ಣಹೊಳಿಸಲಾಗುವುದು.

ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು)

ಅ) ತುನಚಿ–ಬಬಲೇಶ್ವರ ಏತ ನೀರಾವರಿ ಯೋಜನೆಯು ಕರ್ನಾಟಕ ನೀರಾವರಿ ನಿಗಮದ ಅಡಿಯಲ್ಲಿ ಕೈಗೊಂಡಿದ್ದು ಕಾಮಗಾರಿಯ ಪ್ರಸ್ತುತ ಹಂತ ಕೆಳಗಿನಂತಿರುತ್ತದೆ. ತುನಚಿ– ಬಬಲೇಶ್ವರ ಏತ ನೀರಾವರಿ ಯೋಜನೆಗೆ ಬೇಕಾದ ವಿವರವಾದ ಯೋಜನಾ ವರದಿ ಹಾಗೂ ಡಿ.ಟಿ.ಪಿ ತಯಾರಿಸುವ ಸರ್ವೆ ಕಾಮಗಾರಿಗೆ ದಿನಾಂಕ:19–03–2013

ರಂದು ಟೆಂಡರ ಕರೆಯಲಾಗಿತ್ತು. 2013–14ನೇ ಸಾಲಿನ ಬಜೆಟ್ ಮಂಡನೆಯ ಸಮಯದಲ್ಲಿ ತುನಚಿ–ಬಬಲೇಶ್ವರ ಏತ ನೀರಾವರಿ ಯೋಜನೆಯನ್ನು ಸೂಕ್ಷ್ಮ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿ ಕೊಳ್ಳಲು ಸೂಕ್ಷ್ಮ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು ಯೋಜನಾ ವರದಿಯನ್ನು ತಯಾರಿಸಿ ಡಿಸೆಂಬರ್ ಅತ್ಯಂದ ಒಳಗೆ ಪೂರ್ಣ ಪ್ರಮಾಣದ ಡಿ.ಪಿ.ಅರ್ ತಯಾರಿಸುವ ಪ್ರಕ್ರಿಯೆಯು ಕರ್ನಾಟಕ ನೀರಾವರಿ ನಿಗಮದಲ್ಲಿ ಜಾರಿಯಲ್ಲಿದೆ.

ಆ) ತುನಚಿ–ಬಬಲೇಶ್ವರ ಏತ ನೀರಾವರಿ ಯೋಜನೆಯನ್ನು ಈ ಮೊದಲು ಹರಿಕಾಲುವೆ (Flow Irrigation) ಮೂಲಕ ಕಲ್ಪಿಸಲು ಯೋಜಿಸಲಾ ಗಿತ್ತು. ಇದರಿಂದ 26,000 ಹೇಕ್ಟರ್ ಕ್ಷೇತ್ರಕ್ಕೆ ನೀರಾವರಿ ಒದಗಿಸಬಹು ದಾಗಿತ್ತು. ಆದರೆ, ಈ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು ಹೆಚ್ಚು ಇರುವುದರಿಂದ ಹಾಗೂ ಹೆಚ್ಚು ಪ್ರದೇಶವನ್ನು ನೀರಾವರಿಗೆ ಒಳಪಡಿ ಸುವ ಉದ್ದೇಶದಿಂದ ಸೂಕ್ಷ್ಮ ಹನಿ ನೀರಾವರಿ ಪದ್ಧತಿಯನ್ನು ಅಳವಡಿ ಸಲು ನಿರ್ಧರಿಸಲಾಗಿದ್ದು, ಇದರಿಂದ ಒಟ್ಟಾರೆ 42,000 ಹೇಕ್ಟರ್ ಪ್ರದೇಶಕ್ಕೆ ನೀರಾವರಿ ಒದಗಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ವಿವರ ವಾದ ಯೋಜನಾ ವರದಿಯನ್ನು ತಯರಿಸುವ ಕಾರ್ಯವು ಕರ್ನಾಟಕ ನೀರಾವರಿ ನಿಗಮದಲ್ಲಿ ಪ್ರಗತಿಯಲ್ಲಿದ್ದು, ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕರ್ನಾಟಕ ನೀರಾವರಿ ನಿಗಮದಿಂದ ಪಡೆದ ನಂತರ, ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, 2014ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಯೋಜಿಸಲಾಗಿರುತ್ತದೆ.

ಶ್ರೀ ಗೋವಿಂದ ಎಂ.ಕಾರಜೋಳ .– ಮಾನ್ಯ ಅಧ್ಯಕ್ಷರೆ, ಮಾನ್ಯ ಎಂ.ಬಿ.ಪಾಟೀಲ್‌ರವರ ಮೇಲೆ ನಾವು ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿ ದ್ದೆವು ಏಕೆಂದರೆ, ನಾನು ಮಾನ್ಯ ಎಂ.ಬಿ.ಪಾಟೀಲ್‌ರವರ ಕ್ಷೇತ್ರದ ಮತದಾರ ನಾಗಿದ್ದೇನೆ. ಈ ವಿಷಯ ಬಹಳ ಜನರಿಗೆ ಗೊತ್ತಿಲ್ಲ. ನಾನು ಬಬಲೇಶ್ವರದ ಪಕ್ಕದ ಹಳ್ಳಿಯವನ್ನಾಗಿದ್ದೇನೆ. ನಮ್ಮವರೇ ಜಲಸಂಪನ್ಮೂಲ ಇಲಾಖೆ ಸಚಿವ

ರಾಗಿದ್ದು, ನೀರಾವರಿ ಯೋಜನೆಗೆ 10 ಸಾವಿರ ಕೋಟಿ ರೂಪಾಯಿ ಅನುದಾನವನ್ನು ಇಟ್ಟುಕೊಂಡಿದ್ದಾರೆಂದು ಹೇಳುತ್ತಿದ್ದೇವೆ

ಅಧ್ಯಕ್ಷರು :– ನೀವು ಪ್ರಶ್ನೆ ಕೇಳಿ ಅದನ್ನು ಬಿಟ್ಟು ನಿಮ್ಮವರು, ತಮ್ಮವರು ಎಂಬ ಪ್ರಶ್ನೆ ಅಲ್ಲ. ಅವರು ಈ ರಾಜ್ಯದ ಮಂತ್ರಿಗಳಾಗಿದ್ದಾರೆ.

ಶ್ರೀ ಗೋವಿಂದ ಎಂ ಕಾರಜೋಳ :– 2014ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಯೋಜಿಸಲಾಗಿರುತ್ತದೆಂದು ಉತ್ತರ ಕೊಟ್ಟಿದ್ದಾರೆ ಆದ್ದರಿಂದ, ಈ ಸಂದರ್ಭದಲ್ಲಿ ಹೇಳುವುದೇನೆಂದರೆ, 2014ನೇ ಸಾಲಿನಲ್ಲಿ ಇದರ ಬಗ್ಗೆ ಯೋಜಿಸುವುದು ಬೇಡ. ಕೂಡಲೇ ಎಸ್ಟಿಮೇಟ್ ಅನ್ನು re-cast ಮಾಡಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಟೆಂಡರ್ ಕರೆದು ಮೂರು ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ ಈ ವರ್ಷ ಎಷ್ಟು ಅನುದಾನ ಇಟ್ಟಿದ್ದೀರಿ ಎಂದು ಹೇಳಿ. ಈಗ ಎಸ್ಟಿಮೇಟ್ ಆಗಿರುವ Flow Irrigation ಅನ್ನು Drip Irrigation ಗೆ Conversion ಮಾಡಲು ಬಹಳ ಸಮಯ ಬೇಕಾಗುವುದಿಲ್ಲ. ಅದನ್ನು ಕೂಡಲೇ ಮಾಡಿ ಮೂರು ತಿಂಗಳಲ್ಲಿ ನಿಮ್ಮ ಕೈಯಿಂದ ಅಡಿಗಲ್ಲು ಹಾಕಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ ಬಿ. ಪಾಟೀಲ್ : ತುಗಚಿ–ಬಬಲೇಶ್ವರ, ವನ ನೀರಾವರಿ ಯೋಜನೆಯನ್ನು ನಮ್ಮ ಬಜೆಟ್‌ನಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಮಾಡುತ್ತೇವೆಂದು ನಾವು ಘೋಷಣೆ ಮಾಡಿದ್ದೇವೆ. ಮೂಲ ಯೋಜನೆಯಲ್ಲಿ ಇದನ್ನು flow irrigation ಎಂದು ಮಾಡಿದಾಗ ನಮಗೆ ಲಭ್ಯವಿರುವ 2.8 ಟಿ.ಎಂ.ಸಿ. ನೀರಿನಲ್ಲಿ ಸುಮಾರು 26 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗುತ್ತಿತ್ತು. ಈಗ ನಾವು ಬಜೆಟ್‌ನಲ್ಲಿ ತೆಗೆದುಕೊಂಡಿರುವ ತೀರ್ಮಾನದಂತೆ ಅದನ್ನು drip irrigation ಮಾಡುವುದರಿಂದ 42 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗುತ್ತದೆ. ತುಗಚಿ ಜಮಖಂಡಿ ತಾಲ್ಲೂಕಿಗೆ ಮತ್ತು ಬಬಲೇಶ್ವರ ಬಿಜಾಪುರ ತಾಲ್ಲೂಕಿಗೆ ಬರುತ್ತದೆ. ಅದರಲ್ಲೂ ವಿಶೇಷವಾಗಿ ಇವೆಲ್ಲವೂ ಅತಿ ಎತ್ತರದ ಪ್ರದೇಶಕ್ಕೆ ಬರುವಂಥ ಏರಿಯಾಗಳು. ಅಲ್ಲಿ ಯು.ಕೆ.ಪಿ. ಮೂರನೇ ಹಂತದ ಕಾಮಗಾರಿಗಳ್ಯಾವುದೂ ಆಗಿರುವುದಿಲ್ಲ. 640 ಆರ್.ಎಂ.ಗಿಂತ ಜಾಸ್ತಿ

ಇದ್ದಾವೆ. ಅಲ್ಲಿ ತೋಟಗಾರಿಕಾ ಬೆಳೆಯಾದ ದ್ರಾಕ್ಷಿಯನ್ನು ಹೆಚ್ಚು ಬೆಳೆಯುತ್ತೇವೆ ಅದು drip irrigation ಗೆ ಬಹಳ ಸೂಕ್ತವಾಗಿದೆ. ನಮ್ಮಲ್ಲಿ ಲಭ್ಯವಿರುವ 2.8 ಟಿ.ಎಂ.ಸಿ. ನೀರಿನಲ್ಲಿ ನಾವು maximum area ವನ್ನು ಕವರ್ ಮಾಡ ಬೇಕು.

ಗೋವಿಂದ ಕಾರಜೋಳರವರು ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ, ಅದು ನನ್ನ ಮತ ಕ್ಷೇತ್ರಕ್ಕೆ ಬರುತ್ತದೆ. ನಾವು ಉತ್ತರದಲ್ಲಿ ಯೋಜಿಸಲಾಗಿ ರುತ್ತದೆ ಎಂದು ಹೇಳಿದ್ದೇವೆಯೇ ಹೊರತು ಯೋಚಿಸಿ ಎಂದು ಹೇಳಿಲ್ಲ. ಕರ್ನಾಟಕ ನೀರಾವರಿ ನಿಗಮದಿಂದ D P.R ready ಮಾಡುತ್ತಿದ್ದೇವೆ. ಅದನ್ನು ಶೀಘ್ರದಲ್ಲಿಯೇ ಮಾಡಿ ಬರುವಂಥ ಒಂದು ತಿಂಗಳಲ್ಲಿಯೇ ಅದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ನಾವು ಟೆಂಡರ್ ಕರೆಯುತ್ತೇವೆ.

ಶ್ರೀ ಗೋವಿಂದ ಎಂ ಕಾರಜೋಳ : ಒಂದು ತಿಂಗಳಲ್ಲಿ ಮಾಡಿಕೊಡುತ್ತೇವೆ ಎಂದು ಹೇಳಿದುದಕ್ಕೆ ಧನ್ಯವಾದಗಳು.

Distribution of Compensation to Labourers

5(110) ಶ್ರೀ ತನ್ವೀರ್ ಸೇಠ್ . ವಿಧಾನ ಸಭಾ ಸದಸ್ಯರು (ನರಸಿಂಹರಾಜ ಕ್ಷೇತ್ರ) : ಮಾನ್ಯ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ಕೃಷ್ಣರಾಜೇಂದ್ರ ಟೆಕ್ಸ್‌ಟೈಲ್ ಮಿಲ್ ಮುಚ್ಚಿ ಹೋಗಿದ್ದು, ಕಾರ್ಮಿಕರು ಯಾವುದೇ ಪರಿಹಾರ ಇಲ್ಲದೇ ತೊಂದರೆಯಲ್ಲಿರುವುದು ಸರ್ಕಾರದ ಗಮನದಲ್ಲಿಯೇ,

ಆ) ಹಾಗಿದ್ದಲ್ಲಿ, ಕಾರ್ಮಿಕರಿಗೆ ಪರಿಹಾರ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಾಬುರಾವ್ ಚಿಂಚನಸೂರು : (ಮಾನ್ಯ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಹೌದು,